# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/33/2021-22 ದಿನಾಂಕ: 27.04.2022

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಕಂದಾಯ ಅಧಿಕಾರಿ (ಕೆ.ಆರ್.ಪುರ) ರವರು ದಿನಾಂಕ:-27.04.2022 ರಂದು ಹೊರಮಾವು ಉಪ-ವಿಭಾಗದ ರಾಮಮೂರ್ತಿನಗರ ವಾರ್ಡ್-26 ರ ಕಛೇರಿಯಲ್ಲಿ ಮೀಟಿಂಗ್ ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊ.ನಂ |
|---|---|---|---|
| 1 | ಶ್ರೀ.ಬಸವ ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ-26 | |
| 2 | ಶ್ರೀ. ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 9844587466 |
| 3 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ-26 | 9739838297 |
| 4 | ಶ್ರೀ. ಮಹಮ್ಮದ್ ಅಬ್ಬಾಸ್ | | 9916609413 |
| 5 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | 9620101648 |
| 6 | ಶ್ರೀ.ಚಿಟ್ಟಿಬಾಬು, ಸಹಾಯಕರು, | ಅರಣ್ಯ ಬಿ.ಬಿ.ಎಂ.ಪಿ | 9945430665 |
| | ಸಾರ್ವಜನಿಕರು | | |
| 7 | ಶ್ರೀ. ಕೆ.ಪಿ ಉನ್ನಿ | ಸರ್.ಎಂ.ವಿ ನಗರ | - |
| 8 | ಶ್ರೀ. ಕೊಚ್ಚು ಶಂಕರ್ | ಟ್ರೇನಿಟಿ ಬಡಾವಣೆ | - |
| 9 | ಶ್ರೀ. ಟೋನಿ | ಹೊರಮಾವು | - |
| 10 | ಶ್ರೀ. ಸತೀಶ್ ಚಂದ್ರ | ಬಂಜಾರ ಲೇಔಟ್ | - |

Scanned with CamScanner

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.26 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:–**

**ಶ್ರೀ ಟೋನಿ :–** ರವರು ಮಾತನಾಡುತ್ತಾ , ಹೊರಮಾವು ಕಲ್ಕೆರೆ ಮುಖ್ಯ ರಸ್ತೆಯಲ್ಲಿ ಚರಂಡಿಯ ನೀರು ಹರಿದು ರಸ್ತೆಗೆ ಬರುತ್ತಿದ್ದು ಕೂಡಲೇ ಸಂಭಂಧ ಪಟ್ಟ ಅಧಿಕಾರಿಗಳು ಸರಿಯಾದ ಕ್ರಮವನ್ನು ಜರುಗಿಸಿಕೊಡಬೇಕೆಂದು ಕೋರಿರುತ್ತಾರೆ.

**ಕ್ರಮ:–** ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2) ನಮ್ಮ ರಸ್ತೆಯಲ್ಲಿ ದಿನನಿತ್ಯ ಬರುವ ಕಸದ ಬಂಡಿಯು ಇತ್ತೀಚಿನ ದಿನಗಳಲ್ಲಿ ಸರಿಯಾಗಿ ಬರುತ್ತಿಲ್ಲವೆಂದು ತಿಳಿಸಿದರು

**ಕ್ರಮ:–** ಕಿರಿಯ ಆರೋಗ್ಯ ಪರಿವೀಕ್ಷಕರು, ಅಗತ್ಯ ಕ್ರಮವಹಿಸುವಂತೆ ಸೂಚಿಸಿತು.

**ಶ್ರೀಮತಿ ಕೊಚ್ಚು ಶಂಕರ್ ಟ್ರೀನಿಟಿ ಬಡಾವಣೆ :–** ರವರು ಮಾತನಾಡಿ, ಹೊಸದಾಗಿ ಆರ್.ಸಿ.ಸಿ ಚರಂಡಿಯ ಅವಶ್ಯಕತೆ ಇದ್ದು ಕೂಡಲೇ ಚರಂಡಿ ನಿರ್ಮಾಣಮೂಡಿಕೊಡಬೇಕೆಂದು ಕೋರಿರುತ್ತಾರೆ.

**ಕ್ರಮ:–** ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಸತೀಶ್ ಚಂದ್ರ ಬಂಜಾರ್ ಬಡಾವಣೆ :–** ರವರು ಮಾತನಾಡಿ, ಬಡಾವಣೆಯಲ್ಲಿ ತುಂಬಾ ನಾಯಿಗಳು ಇದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು ಕೂಡಲೇ ಸಂಬಂಧ ಪಟ್ಟ ಅದಿಕಾರಿಗಳು ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

**ಕ್ರಮ:–** ಶ್ರೀ. ಮಹಮ್ಮದ್ ಅಬ್ಬಾಸ್ ರವರು ಈ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಸಭೆಯು ಸೂಚಿಸಿತು.

**ಶ್ರೀ. ಕೆ.ಪಿ. ಉನ್ನಿ ಸರ್.ಎಂ.ವಿ ನಗರ ಬಡಾವಣೆ:–** ರವರು ಮಾತನಾಡಿ 6ನೇ ಮುಖ್ಯ ರಸ್ತೆ, 1ನೇ ಅಡ್ಡ ರಸ್ತೆಯಲ್ಲಿ ಮಳೆ ಬಂದಾಗ ನೀರು ತುಂಬಿ ಮನೆಗಳಿಗೆ ನುಗ್ಗುತ್ತಿದ್ದು, ಕೂಡಲೇ ಇದಕ್ಕೆ ಸೂಕ್ತ ಪರಿಹಾರ ಮಾಡಿಕೊಡಬೇಕೆಂದು ತಿಳಿಸಿದರು

**ಕ್ರಮ:–** ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ವಾರ್ಡ್ ಮೀಟಿಂಗ್ ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ–ವಿಭಾಗ ರವರು ಗೂಗಲ್ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Scanned with CamScanner

Scanned with CamScanner